ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017–18 ದಿನಾಂಕ: 3–11––2017

# ಪತ್ರಿಕಾ ಪ್ರಕಟಣೆ

**ಸಂಖ್ಯೆ 259/379**

## ನವೆಂಬರ್ 3 ರಿಂದ 6 ರವರೆಗೆ ಇಂಡಿಯನ್ ರೋಡ್ಸ್ ಕಾಂಗ್ರೆಸ್ ಸಮಾವೇಶ

**ಬೆಂಗಳೂರು, ನವೆಂಬರ್ 3, (ಕರ್ನಾಟಕ ವಾರ್ತೆ)**

ಬೆಂಗಳೂರಿನ ಅರಮನೆ ಮೈದಾನದಲ್ಲಿ ಇಂದಿನಿಂದ ನವೆಂಬರ್ 6 ರವರೆಗೆ ಇಂಡಿಯನ್ ರೋಡ್ಸ್ ಕಾಂಗ್ರೆಸ್ (ಐಆರ್‌ಸಿ) ನ 78 ನೇ ವಾರ್ಷಿಕ ಅಧಿವೇಶನವನ್ನು ಏರ್ಪಡಿಸಲಾಗಿದೆ ಎಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳಾದ ಲೋಕೋಪಯೋಗಿ ಬಂದರು, ಒಳನಾಡು ಜಲಸಾರಿಗೆ ಇಲಾಖೆಯ ಎಂ. ಲಕ್ಷ್ಮೀನಾರಾಯಣ ಅವರು ತಿಳಿಸಿದರು.

ಅವರು ಇಂದು ಅರಮನೆ ಮೈದಾನದಲ್ಲಿ ಹಮ್ಮಿಕೊಳ್ಳಲಾದ ಇಂಡಿಯನ್ ರೋಡ್ಸ್ ಕಾಂಗ್ರೆಸ್ ಅಧಿವೇಶನ ಕುರಿತು ಹಮ್ಮಿಕೊಳ್ಳಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ರಸ್ತೆ, ಸೇತುವೆ, ಸುರಂಗಗಳ ನಿರ್ಮಾಣ ಮತ್ತು ನಿರ್ವಹಣೆ ಹಾಗೂ ತಂತ್ರಜ್ಞಾನ, ಉಪಕರಣ, ಸಂಶೋಧನೆ, ಯೋಜನೆ, ಹಣಕಾಸು, ತೆರಿಗೆ ಸೇರಿದಂತೆ ರಸ್ತೆ ಸಾರಿಗೆಗೆ ಸಂಬಂಧಿಸಿದ ಎಲ್ಲಾ ಬಗೆಯ ವಿಷಯಗಳ ಕುರಿತು ಜ್ಞಾನವನ್ನು ಹಂಚಿಕೊಳ್ಳುವ ಮತ್ತು ಅನುಭವಗಳನ್ನು ಕ್ರೋಢೀಕರಿಸುವುದಕ್ಕೆ ಈ ಸಮಾವೇಶ ಒಂದು ರಾಷ್ಟ್ರೀಯ ವೇದಿಕೆಯಾಗಿದೆ. ಶುದ್ಧವಾದ ಮಿತ ಶಕ್ತಿ ವ್ಯಯದ ಮತ್ತು ಕಡಿಮೆ ಮಾಲಿನ್ಯಕಾರಕ ವಿಧಾನಗಳನ್ನು ಉತ್ತೇಜಿಸಲು ಪರಿಸರ ಪೂರಕ ತಂತ್ರಜ್ಞಾನಗಳ ಉಪಕ್ರಮಗಳನ್ನು ಬಳಸಲು ಹಾಗೂ ನೈಸರ್ಗಿಕ ಸಂಪನ್ಮೂಲಗಳ ಬಳಕೆಯನ್ನು ಮಿತಿಗೊಳಿಸಲು, ಬಳಸಿದ ವಸ್ತುಗಳ ಮರುಬಳಕೆಯನ್ನು ಪ್ರೋತ್ಸಾಹಿಸಲು ಐ.ಆರ್.ಸಿ. ಬದ್ಧವಾಗಿದೆ ಎಂದರು.

ರಸ್ತೆಗಳ ಯೋಜನೆ, ವಿನ್ಯಾಸ, ನಿರ್ಮಾಣ ಮತ್ತು ನಿರ್ವಹಣೆಯಂತಹ ವಿವಿಧ ಮುಖಗಳ ಗಮನಾರ್ಹ ಸುಧಾರಣೆಗೆ ಐಆರ್‌ಸಿ ಮಹತ್ವದ ಕೊಡುಗೆ ನೀಡಿದೆ.

ಕೇಂದ್ರ ಸರ್ಕಾರವು ರಾಜ್ಯಾದ್ಯಂತ ರಸ್ತೆಗಳ ಅಭಿವೃದ್ಧಿಯ ಉದ್ದೇಶದಿಂದ ಸ್ಥಾಪಿಸಲಾದ ಐಆರ್‌ಸಿಯನ್ನು 1934 ರಲ್ಲಿ ಸ್ಥಾಪಿಸಲಾಯಿತು. ಕಳೆದ 78 ವರ್ಷಗಳಲ್ಲಿ ಹಲವಾರು ಗಮನಾರ್ಹ ಸಾಧನೆಯನ್ನು ಐ.ಆರ್.ಸಿ. ಮಾಡಿದ್ದು ಈ ಅಧಿವೇಶನದಲ್ಲಿ ರಾಜ್ಯ, ರಾಷ್ಟ್ರ ಮತ್ತು ವಿದೇಶಗಳ 3000 ಕ್ಕೂ ಹೆಚ್ಚು ಅಧಿಕ ಹೆದ್ದಾರಿ ಇಂಜಿನಿಯರ್‌ಗಳು ಮತ್ತು ತಜ್ಞರು ಭಾಗವಹಿಸುವರು ಎಂದರು.

ರಸ್ತೆಗಳ ಯೋಜನೆ, ವಿನ್ಯಾಸ, ನಿರ್ಮಾಣ ಮತ್ತು ನಿರ್ವಹಣೆಯಂತಹ ವಿವಿಧ ಮುಖಗಳ ಗಮನಾರ್ಹ ಸುಧಾರಣೆಗೆ ಐಆರ್‌ಸಿ ಮಹತ್ವದ ಕೊಡುಗೆ ನೀಡಿದೆ.

ಕೇಂದ್ರ ಸರ್ಕಾರವು ರಾಜ್ಯಾದ್ಯಂತ ರಸ್ತೆಗಳ ಅಭಿವೃದ್ಧಿಯ ಉದ್ದೇಶದಿಂದ ಸ್ಥಾಪಿಸಲಾದ ಐಆರ್‌ಸಿಯನ್ನು 1934 ರಲ್ಲಿ ಸ್ಥಾಪಿಸಲಾಯಿತು. ಕಳೆದ 78 ವರ್ಷಗಳಲ್ಲಿ ಹಲವಾರು ಗಮನಾರ್ಹ ಸಾಧನೆಯನ್ನು ಐಆರ್‌ಸಿ ಮಾಡಿದ್ದು ಈ ಅಧಿವೇಶನದಲ್ಲಿ ರಾಜ್ಯ, ರಾಷ್ಟ್ರ ಮತ್ತು ವಿದೇಶಗಳ 3000 ಕ್ಕೂ ಅಧಿಕ ಹೆದ್ದಾರಿ ಇಂಜಿನಿಯರ್‌ಗಳು ಮತ್ತು ತಜ್ಞರು ಭಾಗವಹಿಸುವರು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಐಆರ್‌ಸಿ ಅಧ್ಯಕ್ಷರಾದ ಎನ್.ಕೆ. ಪ್ರಧಾನ್ ಮಾತನಾಡಿ, ಇಂದಿನ ಹೊಸ ತಂತ್ರಜ್ಞಾನದ ರಸ್ತೆಗಳನ್ನು ಅಭಿವೃದ್ಧಿಪಡಿಸುವುದು ನಮ್ಮ ಉದ್ದೇಶವಾಗಿದೆ. ಇದಕ್ಕೆ ವಿವಿಧ ಇಲಾಖೆಗಳ ಸಹಯೋಗ ಪಡೆಯುತ್ತಿದ್ದೇವೆ. ಅಕ್ರಮ ವ್ಯವಸ್ಥೆಯನ್ನು ಸರಿಪಡಿಸಿ ಜನರಿಗೆ ಉತ್ತಮ ರಸ್ತೆಗಳನ್ನು ನೀಡುವುದು ನಮ್ಮ ಪ್ರಾಧಾನ್ಯತೆಯಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಐಆರ್‌ಸಿ ಕಾರ್ಯದರ್ಶಿ ನಿರ್ಮಲ್, ಮಾಜಿ ಅಧ್ಯಕ್ಷರಾದ ಡಾ ಪೂರ್ವಾಲ್ ಹಾಗೂ ಇತರರು ಉಪಸ್ಥಿತರಿದ್ದರು.

**ಸಂಖ್ಯೆ 260/380**

**ಉತ್ತಮ ಗುಣಮಟ್ಟದ ಹೆದ್ದಾರಿ, ಸೇತುವೆ ನಿರ್ಮಾಣಕ್ಕೆ ಆದ್ಯತೆ: ಮುಖ್ಯಮಂತ್ರಿ ಸಿದ್ದರಾಮಯ್ಯ**

**ಬೆಂಗಳೂರು, ನವೆಂಬರ್ 3, (ಕರ್ನಾಟಕ ವಾರ್ತೆ)**

ಜನರ ಅನುಕೂಲ ಹಾಗೂ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಉತ್ತಮ ಗುಣಮಟ್ಟದ ಹೆದ್ದಾರಿ ಹಾಗೂ ಸೇತುವೆ ನಿರ್ಮಾಣದಲ್ಲಿ ಇಂಡಿಯನ್ ರೋಡ್ಸ್ ಕಾಂಗ್ರೆಸ್ ತೊಡಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅವರು ಇಂದು ಅರಮನೆ ರಸ್ತೆಯ ಗಾಯಿತ್ರಿ ವಿಹಾರದಲ್ಲಿ ಇಂಡಿಯನ್ ರೋಡ್ಸ್ ಕಾಂಗ್ರೆಸ್ ಹಾಗೂ ಕರ್ನಾಟಕ ಸರ್ಕಾರದ ಸಹಯೋಗದಲ್ಲಿ ನವೆಂಬರ್ 3 ರಿಂದ 6 ರವರೆಗೆ ಹಮ್ಮಿಕೊಳ್ಳಲಾದ 78 ನೇ ವಾರ್ಷಿಕ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು.

ಈ ಸಮಾವೇಶವು 13 ವರ್ಷಗಳ ನಂತರ ರಾಜ್ಯದಲ್ಲಿ ನಡೆಯುತ್ತಿದ್ದು, ಇದರಲ್ಲಿ ಸುಮಾರು 3000 ಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

ಜನರ ಜೀವನಾಡಿಯಾಗಿರುವ ಸಾರಿಗೆ ವ್ಯವಸ್ಥೆಯಲ್ಲಿ ಸುಧಾರಣೆ ಕಂಡುಕೊಳ್ಳುವ ನಿಟ್ಟಿನಲ್ಲಿ ರಾಜ್ಯ ಶ್ರಮಿಸುತ್ತಿದೆ. ಉತ್ತಮ ರಸ್ತೆ ಸಾರಿಗೆ ವ್ಯವಸ್ಥೆ ರಾಜ್ಯ ಹಾಗೂ ದೇಶಿಯ ಆರ್ಥಿಕ ಸುಧಾರಣೆಗೆ ಸಾಕ್ಷಿಯಾಗಿವೆ. ನಾವು ಹೆಚ್ಚು ಸುರಕ್ಷತೆಯ ಕಡೆ ಗಮನಹರಿಸುವುದು ಅವಶ್ಯಕ. ಭಾರತದ ಏಳಿಗೆಯಲ್ಲೂ ಇದು ಮುಖ್ಯ ಪಾತ್ರ ವಹಿಸಿದೆ ಎಂದರು.

ಐಟಿ ಹಬ್ ಎಂದೇ ಕರೆಯಲಾಗುವ ಬೆಂಗಳೂರು ಹಾಗೂ ರಾಜ್ಯದ ಇತರ ತಾಲ್ಲೂಕುಗಳಲ್ಲಿ ಸಾರಿಗೆ ವ್ಯವಸ್ಥೆ ಕಳೆದ ದಶಕಕ್ಕಂತೂ ಹೆಚ್ಚು ಅಭಿವೃದ್ಧಿ ಹೊಂದಿದೆ. ಉತ್ತಮ ಯೋಜನೆಗಳು ಜಾರಿಗೆ ಬಂದಿದೆ. ನುರಿತ ಇಂಜಿನಿಯರ್‌ಗಳು, ಒಳ್ಳೆಯ ರಸ್ತೆ ನಿರ್ಮಾಣ ಮಾಡುತ್ತಿದ್ದಾರೆ.

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮವು 1500 ಕಿ.ಮಿ. ರಸ್ತೆಯನ್ನು 601 ಕೋಟಿಗಳಲ್ಲಿ ಮೇಲ್ದರ್ಜೆಗೊಳಿಸಿದೆ. ವಿಶ್ವಬ್ಯಾಂಕ್ ಅನುದಾನದಿಂದ 2585 ಕಿ.ಮಿ. ಗಳ ರಸ್ತೆಯನ್ನು ಅಭಿವೃದ್ಧಿಪಡಿಸಲಾಗಿದೆ. ಕಳೆದ ನಾಲ್ಕುವರೆ ವರ್ಷಗಳಿಂದ ರಾಜ್ಯ ಸರ್ಕಾರ 10,920 ಕಿ.ಮಿ. ಹೆದ್ದಾರಿ ರಸ್ತೆಯನ್ನು 10,961 ಕೋಟಿಗಳಲ್ಲಿ ಹಾಗೂ 21,101 ಕಿ.ಮಿ. ರಸ್ತೆಗಳನ್ನು 8430 ಕೋಟಿ ರೂ.ಗಳಲ್ಲಿ ಅಭಿವೃದ್ಧಿಗೊಳಿಸಲಾಗಿದೆ. ಅಲ್ಲದೆ ಇನ್ನೂ ಹಲವಾರು ರಸ್ತೆ ಯೋಜನೆಗಳನ್ನು ಜಾರಿಗೊಳಿಸಲಾಗಿದೆ ಎಂದರು.

ಇಂಡಿಯನ್ ರೋಡ್ಸ್ ಕಾಂಗ್ರೆಸ್‌ನ ಅಧ್ಯಕ್ಷರಾದ ಎನ್.ಕೆ. ಪ್ರಧಾನ ಮಾತನಾಡಿ ಭಾರತವು ವಿಶ್ವದಲ್ಲಿಯೇ ಅಧಿಕ ಸಂಪರ್ಕ ಸಾರಿಗೆ ಹೊಂದಿರುವ ಎರಡನೇ ರಾಷ್ಟ್ರವಾಗಿದೆ. ಈವರೆಗೆ ನಾವು 407 ಮಿಲಿಯನ್ ಕಿ.ಮಿ. ರಸ್ತೆಗಳನ್ನು ಅಭಿವೃದ್ಧಿಪಡಿಸಿದ್ದೇವೆ. 2021 ರ ವೇಳೆಗೆ ರಸ್ತೆ ಸಂಪರ್ಕ ಇನ್ನಷ್ಟು ಸುಧಾರಣೆ ಹೊಂದಲಿವೆ. ರಸ್ತೆಗಳಲ್ಲಿ ಬಳಸುವ ಲೋಹ ಸ್ಲಾಬ್‌ಗಳಿಗೆ ಮಾರ್ಗ ಸೂಚಿಯನ್ನು ಸಹ ಮಾಡಿದ್ದೇವೆ. ಉತ್ತಮ ಗುಣಮಟ್ಟದ

ಪದಾರ್ಥಗಳನ್ನು ಬಳಸಿ ದೀರ್ಘ ಆಯುಷ್ಯವಿರುವ ರಸ್ತೆ ನಿರ್ಮಾಣಕ್ಕೆ ಆದ್ಯತೆ ನೀಡುತ್ತಿದ್ದೇವೆ. ಸ್ಮಾರ್ಟ್ ಸಿಟಿಗಳ ಪರಿಕಲ್ಪನೆಯಲ್ಲಿ ಮುನ್ನುಗ್ಗುತ್ತಿದ್ದೇವೆ ಎಂದರು.

ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಸಚಿವ ಡಾ: ಹೆಚ್.ಸಿ. ಮಹದೇವಪ್ಪ ಮಾತನಾಡಿ ಇಂದು ಇಲ್ಲಿ 78 ನೇ ಇಂಡಿಯನ್ ರೋಡ್ಸ್ ಕಾಂಗ್ರೆಸ್ ಸಮಾವೇಶವನ್ನು ನಡೆಸುತ್ತಿದ್ದೇವೆ. ಉತ್ತಮ ರಸ್ತೆಗಳ ನಿರ್ಮಾಣಕ್ಕೆ 16 ನಿಯಮಗಳನ್ನು ನಾವು ಪಾಲಿಸಬೇಕಿದೆ. ನಾವು ಇಂದು ಅನೇಕ ಸವಾಲುಗಳನ್ನು ದಿನನಿತ್ಯ ಎದುರಿಸುತ್ತಿದ್ದೇವೆ. ವಿಜ್ಞಾನ ಹಾಗೂ ತಂತ್ರಜ್ಞಾನದ, ಹೊಸ ಬೆಳವಣಿಗೆಗಳನ್ನು ನಾವು ದಿನನಿತ್ಯದ ಬದುಕಿನಲ್ಲಿ ಅಳವಡಿಸಿಕೊಳ್ಳುವುದು ಅವಶ್ಯಕ. ಜನಸ್ನೇಹಿ ರಸ್ತೆ ಹಾಗೂ ಸೇತುವೆಗಳನ್ನು ನಿರ್ಮಾಣ ಹಾಗೂ ನಿರ್ವಹಣೆಯ ಹೊಣೆ ಹೊತ್ತಿರುವ ಸರ್ಕಾರ, ಇದಕ್ಕೆ ಹಗಲಿರುಳು ಶ್ರಮಿಸುತ್ತಿದೆ. ಜಿಲ್ಲೆ–ಜಿಲ್ಲೆ, ತಾಲ್ಲೂಕು–ತಾಲ್ಲೂಕು ಸಂಪರ್ಕ ಕಲ್ಪಿಸುವ ಪ್ರಯತ್ನ ನಡೆಸುತ್ತಿವೆ. ಈ ಸರ್ಕಾರದಲ್ಲಿ 30,000 ಕಿ.ಮಿ. ಉತ್ತಮ ಗುಣಮಟ್ಟದ ರಸ್ತೆಗಳು, 10,000 ಕಿ.ಮಿ. ರಾಜ್ಯ ಹೆದ್ದಾರಿಗಳು, 21,000 ಕಿ.ಮಿ. ಜಿಲ್ಲಾ ರಸ್ತೆಗಳನ್ನು ನಿರ್ಮಾಣ ಮಾಡಲಾಗಿದೆ. ಪರಿಶಿಷ್ಟ ಜಾತಿ ಪಂಗಡದ ಜನವಸತಿಗಳಿಗೆ ಒಟ್ಟು ಅನುದಾನದ ಶೇ. 21 ರಷ್ಟು ವ್ಯಯ ಮಾಡಿ ರಸ್ತೆ ನಿರ್ಮಾಣ ಮಾಡಲಾಗಿದೆ. ಒಟ್ಟಿನಲ್ಲಿ ಜನೋಪಯೋಗಿ ಕೆಲಸ ಮಾಡಲು ತಾವು ಬದ್ಧರಿರುವುದಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಸಾರಿಗೆ ಇಲಾಖೆ ಎಂ. ಲಕ್ಷ್ಮೀನಾರಾಯಣ ಅವರು ಸ್ವಾಗತ ಕೋರಿದರು. ಇಂಡಿಯನ್ ರೋಡ್ಸ್ ಕಾಂಗ್ರೆಸ್‌ನ ಕಾರ್ಯದರ್ಶಿಗಳಾದ ಎನ್.ಕೆ.ನಿರ್ಮಲ್ ಮಾಜಿ ಅಧ್ಯಕ್ಷರಾದ ಹೂರ್ವಲ್. ಮಲ್ಲೇಶ್ವರಂ ಶಾಸಕರಾದ ಡಾ.ಅಶ್ವತ್ಥ್‌ನಾರಾಯಣ್ ಹಾಗೂ ಸಂಸ್ಥೆಯ ಇತರ ಗಣ್ಯರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಸ್ಮರಣ ಸಂಚಿಕೆ ಬಿಡುಗಡೆ ಮಾಡಿ ಸಾಧಕರನ್ನು ಸನ್ಮಾನಿಸಲಾಯಿತು.

**ಸಂಖ್ಯೆ 261/381**

## ಮೂಲ ದಾಖಲೆಗಳ ಪರಿಶೀಲನೆ

**ಬೆಂಗಳೂರು, ನವೆಂಬರ್ 3, (ಕರ್ನಾಟಕ ವಾರ್ತೆ)**

ಕರ್ನಾಟಕ ಲೋಕಸೇವಾ ಆಯೋಗವು ದಿ: 6–4–2016 ರ ಅಧಿಸೂಚನೆಯಲ್ಲಿ ಅಧಿಸೂಚಿಸಿದ ಪೌರಾಡಳಿತ ನಿರ್ದೇಶನಾಲಯದ ಮಹಾನಗರ ಪಾಲಿಕೆಗಳಲ್ಲಿನ ಕಿರಿಯ ಆರೋಗ್ಯ ನಿರೀಕ್ಷಕರು ಹಾಗೂ ನಗರಸಭೆ/ಪುರಸಭೆಗಳಲ್ಲಿನ ಕಿರಿಯ ಆರೋಗ್ಯ ನಿರೀಕ್ಷಕರುಗಳ ಹುದ್ದೆಗಳಿಗೆ 2 ನೇ ಹಂತದ ಮೂಲ ದಾಖಲಾತಿಗಳ ಪರಿಶೀಲನೆಗೆ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಆಯೋಗದ ಅಂತರ್ಜಾಲದಲ್ಲಿ http://kpsc.kar.nic.in ಪ್ರಕಟಿಸಲಾಗಿದೆ. ಮೂಲ ದಾಖಲೆಗಳ ಪರಿಶೀಲನಾ ಕಾರ್ಯವನ್ನು ದಿ: 10–11–2017 ರಂದು ನಡೆಸಲು ತೀರ್ಮಾನಿಸಲಾಗಿದ್ದು, ಅರ್ಹ ಅಭ್ಯರ್ಥಿಗಳಿಗೆ ಸೂಚನಾ ಪತ್ರಗಳನ್ನು ಈಗಾಗಲೇ ಅಂಚೆ ಮೂಲಕ ರವಾನಿಸಲಾಗಿರುತ್ತದೆ.

**ಸಂಖ್ಯೆ 262/382**

# ಬೆಳಗಾವಿ ಅಧಿವೇಶನ ನವೆಂಬರ್ 13 ರಿಂದ ಪ್ರಾರಂಭ

**ಬೆಂಗಳೂರು, ನವೆಂಬರ್ 3, (ಕರ್ನಾಟಕ ವಾರ್ತೆ)**

14 ನೇ ವಿಧಾನಸಭೆಯ 15 ನೇ ಅಧಿವೇಶನವು ಸೋಮವಾರ, ದಿನಾಂಕ 13 ನೇ ನವೆಂಬರ್, 2017 ರಂದು ಬೆಳಿಗ್ಗೆ 11.00 ಗಂಟೆಗೆ ಬೆಳಗಾವಿಯ ಸುವರ್ಣಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಸಮಾವೇಶಗೊಳ್ಳಲಿದೆ.

**ಸಂಖ್ಯೆ 263/383**

# "ಇಕೆಬಾನ ಜೂನಿಯರ್" ತರಬೇತಿ

**ಬೆಂಗಳೂರು, ನವೆಂಬರ್ 3, (ಕರ್ನಾಟಕ ವಾರ್ತೆ)**

ಮೈಸೂರು ತೋಟಗಾರಿಕೆ ಸೊಸೈಟಿ, ಲಾಲ್‌ಬಾಗ್, ಬೆಂಗಳೂರು ಇಲ್ಲಿ "ಇಕೆಬಾನ ಜೂನಿಯರ್" ಅಲಂಕಾರಿಕ ಹೂ ಅಲಂಕಾರ ಕುರಿತು ತರಬೇತಿಯನ್ನು ನವೆಂಬರ್ 6 ರಂದು ಮಧ್ಯಾಹ್ನ 3–00 ಗಂಟೆಗೆ ಡಾ: ಎಂ.ಹೆಚ್. ಮರಿಗೌಡ ಮೆಮೋರಿಯಲ್ ಹಾಲ್, ಲಾಲ್‌ಬಾಗ್, ಬೆಂಗಳೂರು ಇಲ್ಲಿ ಏರ್ಪಡಿಸಿದೆ. ಹೆಚ್ಚಿನ ವಿವರಗಳಿಗೆ ಕಾರ್ಯದರ್ಶಿ,

ಮೈಸೂರು ತೋಟಗಾರಿಕೆ ಸೊಸೈಟಿ, ಲಾಲ್‌ಬಾಗ್, ಬೆಂಗಳೂರು–4 ದೂರವಾಣಿ 26576781 ನ್ನು ಸಂಪರ್ಕಿಸಲು ಪ್ರಕಟಣೆ ತಿಳಿಸಿದೆ.

**ಸಂಖ್ಯೆ 264/384**

## ರಾಜ್ಯಮಟ್ಟದ ಕಲಾಶ್ರೀ ಆಯ್ಕೆ ಶಿಬಿರ

**ಬೆಂಗಳೂರು, ನವೆಂಬರ್ 3, (ಕರ್ನಾಟಕ ವಾರ್ತೆ)**

ಬಾಲ ಭವನವು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ಸಚಿವಾಲಯದಡಿಯಲ್ಲಿ ಮಕ್ಕಳಿಗಾಗಿ ವಿವಿಧ ಚಟುವಟಿಕೆಗಳನ್ನು ನಡೆಸುತ್ತಿದ್ದು ಮಕ್ಕಳ ದಿನಾಚರಣೆ –2017 ರ ಅಂಗವಾಗಿ ರಾಜ್ಯಮಟ್ಟದ ಕಲಾಶ್ರೀ ಆಯ್ಕೆ ಶಿಬಿರವನ್ನು ದಿನಾಂಕ 10–11–2017 ರಿಂದ ದಿನಾಂಕ 14–11–2017 ರವರೆಗೆ ನಡೆಸಲು ಉದ್ದೇಶಿಸಿದೆ. ಪ್ರಯುಕ್ತ ವಿಜ್ಞಾನ ಕ್ಷೇತ್ರದಲ್ಲಿ ಪ್ರತಿಭಾವಂತ ಮಕ್ಕಳನ್ನು ಆಯ್ಕೆಮಾಡಿ ರಾಜ್ಯಮಟ್ಟದ ಶಿಬಿರಕ್ಕೆ ನಿಯೋಜಿಸಲು ಅನುವಾಗುವಂತೆ, ಬೆಂಗಳೂರು ನಗರದ ಮಕ್ಕಳಿಗೆ ಮಾತ್ರ ಬಾಲ ಭವನ, ಕಬ್ಬನ್ ಉದ್ಯಾನವನ, ಬೆಂಗಳೂರು ಇಲ್ಲಿ ಸ್ಥಳೀಯ ಮಟ್ಟದ ಆಯ್ಕೆ ಶಿಬಿರವನ್ನು ದಿನಾಂಕ 5–11–2017 ಏರ್ಪಡಿಸಿದ್ದು, ವಿವರಗಳು ಇಂತಿದೆ.

ವಿಜ್ಞಾನದಲ್ಲಿ ನೂತನ ಆವಿಷ್ಕಾರ– ವಿಜ್ಞಾನಕ್ಕೆ ಸಂಬಂಧಪಟ್ಟಂತೆ ಒಂದು ವಿಷಯದ ಬಗ್ಗೆ ಮಾದರಿ ಪ್ರದರ್ಶನ ಹಾಗೂ ವಿವರಣೆ ಮತ್ತು ವಿಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ತೀರ್ಪುಗಾರರ ಇನ್ನಿತರ ಪ್ರಶ್ನೆಗಳಿಗೆ ಉತ್ತರ ಈ ಪ್ರಕಾರಗಳಲ್ಲಿ ಪ್ರಾವೀಣ್ಯತೆ ಹೊಂದಿರುವ 9–16 ವರ್ಷದ ಮಕ್ಕಳು ಸ್ಥಳೀಯ ಮಟ್ಟದ ಆಯ್ಕೆಯಲ್ಲಿ ಪಾಲ್ಗೊಂಡು ಆಯ್ಕೆಯಾದಲ್ಲಿ ರಾಜ್ಯಮಟ್ಟದ ಶಿಬಿರದಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗುವುದು. ಹೆಚ್ಚಿನ ವಿವರಗಳಿಗೆ ಹಾಗೂ ನೋಂದಣಿಗಾಗಿ ಕಾರ್ಯದರ್ಶಿಗಳ ಕಚೇರಿ, ಬಾಲ ಭವನ ಸೊಸೈಟಿ, ಬೆಂಗಳೂರು –1 ಇಲ್ಲಿ ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ 22864189/ 22861423 ಮೂಲಕ ಸಂಪರ್ಕಿಸಲು ಬಾಲಭವನದ ಪ್ರಕಟಣೆ ತಿಳಿಸಿದೆ.

**ಸಂಖ್ಯೆ 265/385**

## ಅವಧಿ ವಿಸ್ತರಣೆ

**ಬೆಂಗಳೂರು, ನವೆಂಬರ್ 3, (ಕರ್ನಾಟಕ ವಾರ್ತೆ)**

2018 ನೇ ಮಾರ್ಚ್/ಏಪ್ರಿಲ್ ಮಾಹೆಯಲ್ಲಿ ನಡೆಯಲಿರುವ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತುಕೊಳ್ಳುವ ಅಭ್ಯರ್ಥಿಗಳ ನೋಂದಣಿ, ಪರೀಕ್ಷಾ ಶುಲ್ಕ ಹಾಗೂ ನಾಮಿನಲ್ ರೋಲ್ ಪ್ರಸ್ತಾವನೆಗಳನ್ನು ಸಲ್ಲಿಸುವ ದಿನಾಂಕಗಳನ್ನು ಕೆಳಕಂಡಂತೆ ಅಂತಿಮವಾಗಿ ವಿಸ್ತರಿಸಲಾಗಿದೆ. ಖಾಸಗಿ ಅಭ್ಯರ್ಥಿಗಳಾಗಿ ಜಿಲ್ಲಾ ಉಪ ನಿರ್ದೇಶಕರ ಕಛೇರಿಯಲ್ಲಿ ನೋಂದಣಿ ಮಾಡಿಕೊಳ್ಳುವುದು ನವೆಂಬರ್ 10, ಶಾಲೆಯವರು ಶಾಲಾ /ಖಾಸಗಿ/ಪುನರಾವರ್ತಿತ ಅಭ್ಯರ್ಥಿಗಳಿಂದ ಪರೀಕ್ಷಾ ಶುಲ್ಕ ಸ್ವೀಕರಿಸಿ ಬ್ಯಾಂಕಿಗೆ NEFT ಚಲನ್ ಮೂಲಕ ಜಮೆ ನವೆಂಬರ್ 13. ನಾಮಿನಲ್ ರೋಲ್ ಪ್ರಸ್ತಾವನೆ ಹಾಗೂ ಬ್ಯಾಂಕ್ ಚಲನ್‌ನ ಮೂಲ ಪ್ರತಿ ಶಾಲೆಗಳಿಂದ ಮಂಡಳಿಗೆ ತಲುಪಿಸುವುದುನ. 14 ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

**ಸಂಖ್ಯೆ 266/386**

# ಅರ್ಜಿ ಆಹ್ವಾನ

**ಬೆಂಗಳೂರು, ನವೆಂಬರ್ 3, (ಕರ್ನಾಟಕ ವಾರ್ತೆ)**

ಕರ್ನಾಟಕ ಸರ್ಕಾರದ ಸಚಿವಾಲಯದ ಕಂದಾಯ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ರಾಜ್ಯ ಯೋಜನಾ ಅನುಷ್ಠಾನ ಘಟಕದ ವಿಶ್ವಬ್ಯಾಂಕ್ ನೆರವಿನ ಎನ್‌ಸಿಆರ್‌ಎಂಪಿ ಯೋಜನೆಯಡಿ ಮಂಜೂರಾಗಿರುವ ಈ ಕೆಳಕಂಡ ಹುದ್ದೆಗಳಿಗೆ ತಾತ್ಕಾಲಿಕವಾಗಿ ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನೇಮಿಸುವ ಸಲುವಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ಹೊಂದಿರಬೇಕಿರುವ ವಿದ್ಯಾರ್ಹತೆ, ಸಂಭಾವನೆ, ಇತ್ಯಾದಿ ವಿವರ ಈ ಕೆಳಕಂಡಂತಿದೆ.

ಯೋಜನಾ ವ್ಯವಸ್ಥಾಪಕರು ಒಂದು ಹುದ್ದೆ ಮಾಸಿಕ ಸಂಭಾವನೆ 60,000/- ರೂ. ಫೈನಾನ್ಶಿಯಲ್ ಕಂಟ್ರೋಲರ್ ಒಂದು ಹುದ್ದೆ ಮಾಸಿಕ ಸಂಭಾವನೆ ರೂ. 50,000/- ಡಾಟಾ ಎಂಟ್ರಿ ಆಪರೇಟರ್/ದ್ವಿತೀಯ ದರ್ಜೆ ಸಹಾಯಕರು 2 ಹುದ್ದೆ ಮಾಸಿಕ 15,000 (ಸಂಚಿತ) ಅರ್ಹ ಅಭ್ಯರ್ಥಿಗಳು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, (ವಿಪತ್ತು ನಿರ್ವಹಣೆ) ಹಾಗೂ ರಾಜ್ಯ ಯೋಜನಾ ಅನುಷ್ಠಾನ ಘಟಕ, (ಎನ್‌ಸಿಆರ್‌ಎಂಪಿ) ಕೊಠಡಿ ಸಂ. 627, 6 ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು -1 ಇಲ್ಲಿಗೆ ದಿನಾಂಕ 30-10-2017 ರೊಳಗೆ ನೋಂದಾಯಿತ ಅಂಚೆ ಮೂಲಕ ಅಥವಾ ಇ-ಮೇಲ್ ಮೂಲಕ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗೆ ದೂರವಾಣಿ 080-22353980/22340676 pdncrmpkar@gmail.com, ಇ ಮೇಲ್ ನ್ನು ಸಂಪರ್ಕಿಸಲು ಪ್ರಕಟಣೆ ತಿಳಿಸಿದೆ.